# ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

## ನವೆಂಬರ್ ೧೪, ೨೦೨೪ರ ಗುರುವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೮ನೇ ಸಭೆಯ ನಡೆವಳಿಗಳು

| | |
|---|---|
| ೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪರವಾಗಿ ಶ್ರೀ ಬಸವರಾಜ ಹೂಗಾರ, ಜಂಟಿ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಬುರಗಿ | : ಸದಸ್ಯರು |
| ೦೩. ಶ್ರೀ ಸೋಮಶೇಖರ ಬಣ್ಣದ ಮನೆ, ಹೊಸಪೇಟೆ | : ಸದಸ್ಯರು |
| ೦೪. ಡಾ. ಎಸ್.ಎಂ. ಮುತ್ತಯ್ಯ, ಶಿವಮೊಗ್ಗ | : ಸದಸ್ಯರು |
| ೦೫. ಶ್ರೀ ಎನ್.ಎ. ಮಹಮ್ಮದ್ ಇಸ್ಮಾಯಿಲ್, ಬೆಂಗಳೂರು | : ಸದಸ್ಯರು |
| ೦೬. ಡಾ. ಬಂಜಗೆರೆ ಜಯಪ್ರಕಾಶ್, ರಾಮನಗರ | : ಸದಸ್ಯರು |
| ೦೭. ಶ್ರೀ ಕೆ. ಫಣಿರಾಜ್, ಉಡುಪಿ | : ಸದಸ್ಯರು |
| ೦೮. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೯. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೦. ಡಾ. ಎ. ಶ್ರೀಧರ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೧. ಡಾ. ವಿಜಯ್ ಪೂಣಚ್ಚ ತಂಬಂಡ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ಡಾ. ಸುಮಾ ಬಿ.ಯು., ಬೆಂಗಳೂರು | : ಸದಸ್ಯರು |
| ೦೬. ಡಾ. ನಟರಾಜ್ ಹುಳಿಯಾರ್, ಬೆಂಗಳೂರು | : ಸದಸ್ಯರು |
| ೦೭. ಶ್ರೀ ಬಿ.ಆರ್. ಪಾಟೀಲ್, ಕಲಬುರಗಿ | : ಸದಸ್ಯರು |
| ೦೮. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೯. ಡಾ. ಶೈಲಜ ಇಂ. ಹಿರೇಮಠ, ಡೀನ್, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೨೫.೦೯.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೭ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೨೫.೦೯.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೭ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೨೫.೦೯.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೭ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೨೫.೦೯.೨೦೨೪ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೭ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

ಹಾಗೂ ಕರ್ನಾಟಕ ಇತಿಹಾಸ ಅಕಾದೆಮಿ (ರಿ.), ಬೆಂಗಳೂರು ಇವರ ಸಹಯೋಗದೊಂದಿಗೆ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ೯, ೧೦ ಹಾಗೂ ೧೧ ನವಂಬರ್ ೨೦೨೪ರಂದು ನಡೆದ ಕರ್ನಾಟಕ ಇತಿಹಾಸ ಅಕಾದೆಮಿಯ ೩೮ನೇ ವಾರ್ಷಿಕ ರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರಶಸ್ತಿ ಸಮಾರಂಭ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸಿದರು.

೨೨೮.೦೧ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಭದ್ರತೆ ಮತ್ತು ಸ್ವಚ್ಛತೆ ಸಿಬ್ಬಂದಿಗಳ ಮನವಿ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದಲ್ಲಿ ಭದ್ರತೆ ಮತ್ತು ಸ್ವಚ್ಛತೆ ಕಾರ್ಯಗಳನ್ನು ನಿರ್ವಹಿಸಲು ಮೆ. ಕೌಶಲ್ಯ ಸೆಕ್ಯುರಿಟಿ ಸರ್ವಿಸ್, ಕಲಬುರಗಿ ಸಂಸ್ಥೆ ಇವರಿಗೆ ನೀಡಲಾಗಿತ್ತು. ಸದರಿ ಸಂಸ್ಥೆಯ ಸೇವೆಯನ್ನು ದಿನಾಂಕ ೩೦.೦೯.೨೦೨೪ರಿಂದ ಅನ್ವಯವಾಗುವಂತೆ ರದ್ದುಗೊಳಿಸಲಾಗಿದೆ. ಪರಿಣಾಮವಾಗಿ, ಸದರಿ ಸಂಸ್ಥೆಯ ಅಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭದ್ರತೆ ಮತ್ತು ಸ್ವಚ್ಛತೆ ಸಿಬ್ಬಂದಿಗಳು ಮಾನವೀಯತೆ ದೃಷ್ಟಿಯಿಂದ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಇವರಿಗೆ ಬೆಂಬಲ ಸೂಚಿಸಿ ಸ್ಥಳೀಯ ಶಾಸಕರು, ಸ್ಥಳೀಯ ಸಂಘಟನೆಗಳು/ಸಂಘ ಸಂಸ್ಥೆಗಳು ಸದರಿ ಹೊರಗುತ್ತಿಗೆ ಆಧಾರಿತ ನೌಕರರನ್ನು ವಿಶ್ವವಿದ್ಯಾಲಯದಲ್ಲಿ ಮುಂದುವರಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. ಸದರಿ ಹೊರಗುತ್ತಿಗೆ ಸಿಬ್ಬಂದಿಗಳಿಂದ ಭದ್ರತೆ ಮತ್ತು ಸ್ವಚ್ಛತೆ ಸೇವೆಯನ್ನು ಮುಂದುವರಿಸುವ ಕುರಿತು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ, ಹೊಸಪೇಟೆ ವಿಧಾನಸಭಾ ಕ್ಷೇತ್ರದ/ಸ್ಥಳೀಯ ಶಾಸಕರಾದ ಶ್ರೀ ಹೆಚ್.ಆರ್. ಗವಿಯಪ್ಪ ಅವರು ಈ ಸಂಬಂಧ ವಿಶ್ವವಿದ್ಯಾಲಯಕ್ಕೆ ಅನುದಾನ ದೊರಕಿಸಿಕೊಡಲು ಉನ್ನತ ಶಿಕ್ಷಣ ಇಲಾಖೆ ಮಂತ್ರಿಗಳಿಗೆ ವೈಯಕ್ತಿಕವಾಗಿ ಮನವಿ ಮಾಡುತ್ತೇನೆ ಎಂದು ಭರವಸೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಆರಂಭಿಸಲು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಭದ್ರತೆ ಮತ್ತು ಸ್ವಚ್ಛತೆ ಕಾರ್ಯನಿರ್ವಹಿಸಲು ಹೊರಗುತ್ತಿಗೆ ಆಧಾರಿತ ನೌಕರರ ಸೇವೆಯನ್ನು ಕೊಟೇಶನ್ ಮೂಲಕ ಪಡೆಯಲು ಸಭೆ ಅನುಮೋದಿಸಿತು. ಹಾಗೂ ಟೆಂಡರ್‌ಗೆ ಸಂಬಂಧಿಸಿದ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ಸೂಚಿಸಿತು.

೨೨೮.೦೨ ವಿಶೇಷ ಪರಿಣಿತಿ ಡಿಪ್ಲೊಮಾ ಕೋರ್ಸ್ ಆರ್ಟ್ ಮಾಸ್ಟರ್ (ಎ.ಎಂ.ಸಿ.) ಕೋರ್ಸ್‌ಗೆ ತತ್ಸಮಾನ ಕುರಿತು ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದಲ್ಲಿ ದಿನಾಂಕ ೧೬.೧೦.೨೦೨೪ರಂದು ನಡೆದ ವಿಶೇಷ ಪರಿಣಿತಿ ಡಿಪ್ಲೊಮಾ ಕೋರ್ಸ್ ಆರ್ಟ್ ಮಾಸ್ಟರ್ (ಎ.ಎಂ.ಸಿ.) ಕೋರ್ಸ್‌ಗೆ ತತ್ಸಮಾನ ಕುರಿತು ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

೨೨೮.೦೩ ಕನ್ನಡ ವಿಶ್ವವಿದ್ಯಾಲಯದ ೩೩ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಆರಂಭಿಸುವ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ೩೩ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಸಭೆಯು ಪರಿಶೀಲಿಸಿ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

೧. ೩೩ನೇ ನುಡಿಹಬ್ಬದ ಘಟಿಕೋತ್ಸವವನ್ನು ೨೦೨೫ರ ಜನವರಿ ತಿಂಗಳಲ್ಲಿ ನಡೆಸಲು ಘನತೆವೆತ್ತ ರಾಜ್ಯಪಾಲರ ಹಾಗೂ ಉನ್ನತ ಶಿಕ್ಷಣ ಸಚಿವರ ದಿನಾಂಕವನ್ನು ಕೋರಿ ಪತ್ರ ಬರೆಯುವುದು.

೨. ೩೩ನೇ ನುಡಿಹಬ್ಬದ ಘಟಿಕೋತ್ಸವ ಭಾಷಣಕಾರರನ್ನಾಗಿ (ಮುಖ್ಯ ಅತಿಥಿಗಳು) .................................................................................................................... ಇವರುಗಳಲ್ಲಿ ಒಬ್ಬರನ್ನು ಆಯ್ಕೆ ಮಾಡುವಂತೆ ಘನತೆವೆತ್ತ ಕುಲಾಧಿಪತಿಗಳನ್ನು ಕೋರಲು ಸಭೆ ತೀರ್ಮಾನಿಸಿತು (ಸೂಚಿತ ಹೆಸರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಗೌಪ್ಯವಾಗಿರಿಸಲಾಗಿದೆ).

೩. ೩೩ನೇ ನುಡಿಹಬ್ಬದ ನಾಡೋಜ ಆಯ್ಕೆ ಸಮಿತಿಗೆ ........................................................................ ಇವರುಗಳಲ್ಲಿ ಒಬ್ಬರನ್ನು ಕನ್ನಡ ವಿಶ್ವವಿದ್ಯಾಲಯದ ಪ್ರತಿನಿಧಿ/ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಭೆ ಅನುಮೋದನೆ ನೀಡಿತು (ಸೂಚಿತ ಹೆಸರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಗೌಪ್ಯವಾಗಿರಿಸಲಾಗಿದೆ).

೪. ಕನ್ನಡ ವಿಶ್ವವಿದ್ಯಾಲಯದ ೩೩ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ೧೦ ಮಂದಿ ಸಾಧಕರ ಪಟ್ಟಿಯನ್ನು ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

೧.
೨.
೩.
೪.
೫.
೬.
೭.
೮.
೯.
೧೦.

(ಸೂಚಿತ ಹೆಸರುಗಳನ್ನು ಆಯ್ಕೆ ಸಮಿತಿಗೆ ಸಲ್ಲಿಸಬೇಕಾಗಿರುವ ಹಿನ್ನೆಲೆಯಲ್ಲಿ ಗೌಪ್ಯವಾಗಿರಿಸಲಾಗಿದೆ).

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

**೨೨೮.೦೪** ಬಿ.ವಿ.ಎ. (ಚಿತ್ರಕಲೆ) ವಿದ್ಯಾರ್ಹತೆಯು ಪದವಿಗೆ ತತ್ಸಮಾನ ವಿದ್ಯಾರ್ಹತೆ ಕುರಿತು.

ಟಿಪ್ಪಣಿ : ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಪತ್ರ ಸಂಖ್ಯೆ ಇಡಿ ೫೨೩ ಯುಆರ್‌ಸಿ ೨೦೨೪ ದಿನಾಂಕ ೨೨.೧೦.೨೦೨೪ರ ಮೂಲಕ ಕನ್ನಡ ವಿಶ್ವವಿದ್ಯಾಲಯವು ನಡೆಸುತ್ತಿರುವ ಬಿ.ವಿ.ಎ. (ಚಿತ್ರಕಲೆ) ವಿದ್ಯಾರ್ಹತೆಯು ಪದವಿಗೆ ತತ್ಸಮಾನ ವಿದ್ಯಾರ್ಹತೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಲು ಸೂಚಿಸಿರುತ್ತದೆ.

ಸದರಿ ಪದವಿಗೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ), ನವದೆಹಲಿ ಇವರಿಂದ ಮಾನ್ಯತೆ ಪಡೆದಿರುತ್ತದೆ ಹಾಗೂ ರಾಜ್ಯಪಾಲರಿಂದ ಬಿ.ವಿ.ಎ. ಪದವಿಯ ಅನುಶಾಸನ ಅನುಮೋದನೆಗೊಂಡಿರುತ್ತದೆ. ಮತ್ತು ಬಿ.ವಿ.ಎ. (ಚಿತ್ರಕಲೆ) ಶಿಕ್ಷಣ ಪ್ರವೇಶಕ್ಕೆ ೧೦+೨ ವಿದ್ಯಾರ್ಹತೆ ಹೊಂದಿರುವವರನ್ನು ಪರಿಗಣಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ನಡೆಸಿಕೊಂಡು ಬರುತ್ತಿರುವ ಬ್ಯಾಚುಲರ್ ಆಫ್ ವಿಜುವಲ್ ಆರ್ಟ್ಸ್ (ಬಿ.ವಿ.ಎ.) ಶಿಕ್ಷಣವು ಪದವಿಗೆ ತತ್ಸಮಾನವಾಗಿರುತ್ತದೆ. ಸದರಿ ವಿಷಯವನ್ನು ಶಿಕ್ಷಣ ಇಲಾಖೆಗೆ ಪತ್ರದ ಮೂಲಕ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ, ಶಿಕ್ಷಣ ಇಲಾಖೆಗೆ ಮಾಹಿತಿಯನ್ನು ಪತ್ರದ ಮೂಲಕ ಸಲ್ಲಿಸಲು ನಿರ್ಣಯಿಸಿತು.

**೨೨೮.೦೫** ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು ಇವರನ್ನು ಕನ್ನಡ ವಿಶ್ವವಿದ್ಯಾಲಯದಿಂದ ಹುದ್ದೆ ರಹಿತವಾಗಿ ವರ್ಗಾವಣೆಗೊಳಿಸುವ ಕುರಿತು.

ಟಿಪ್ಪಣಿ : ಶ್ರೀ ಶಂಕರಗೌಡ ಎಸ್. ಗುಂಡಕನಾಳ, ಸಹಾಯಕ ಗ್ರಂಥಪಾಲಕರು ಮೂಲತಃ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರನ್ನು ಕನ್ನಡ ವಿಶ್ವವಿದ್ಯಾಲಯದಿಂದ ಹುದ್ದೆ ರಹಿತವಾಗಿ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ ಇಲ್ಲಿ ಖಾಲಿಯಿರುವ ಸಹಾಯಕ ಗ್ರಂಥಪಾಲಕರ ಹುದ್ದೆಗೆ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಷರತ್ತುಬದ್ಧವಾಗಿ ಅಂತರ್ ವಿಶ್ವವಿದ್ಯಾಲಯದ ವರ್ಗಾವಣೆ ಮಾಡಿ ಸರ್ಕಾರದ ಆದೇಶ ಸಂ. ಇಡಿ. ೦೬ ಯುಜಿವಿ ೨೦೨೩, ಬೆಂಗಳೂರು ದಿನಾಂಕ ೧೧.೦೯.೨೦೨೪ರನ್ವಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಕ್ರಮಕ್ಕೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಯೊಂದಿಗೆ ಸಿಂಧುಗೊಳಿಸಲು ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ, ಈ ಸಂಬಂಧ ಕೈಗೊಳ್ಳಲಾದ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಿತು.

**೨೨೮.೦೬** ದಿವಂಗತ ಶ್ರೀ ದೇವೇಂದ್ರಪ್ಪ ಬಿ. ಇವರ ಅವಲಂಬಿತ ಕುಟುಂಬ ಸದಸ್ಯರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದಲ್ಲಿ 'ಡಿ' ದರ್ಜೆ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ದೇವೇಂದ್ರಪ್ಪ ಬಿ. ಇವರು ದಿನಾಂಕ ೨೨.೦೮.೨೦೨೪ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಸದರಿಯವರ ಕುಟುಂಬದ ನಿರ್ವಹಣೆಗಾಗಿ ಅನುಕಂಪದ ಹುದ್ದೆ ನೀಡಬೇಕೆಂದು ಇವರ ಪತ್ನಿ ದಿನಾಂಕ ೨೪.೧೦.೨೦೨೪ರಂದು ಮಾನ್ಯ ಕುಲಸಚಿವರಿಗೆ ಮನವಿ ಪತ್ರ ಸಲ್ಲಿಸಿದ್ದು, ಅನುಕಂಪ ಹುದ್ದೆ ನೀಡಬೇಕೆಂದು ಕೋರಿದ್ದಾರೆ. ಮಾನ್ಯ ಕುಲಪತಿಗಳು ಮನವಿಯನ್ನು ಪರಿಗಣಿಸಿ, ದಿನಾಂಕ ೦೪.೧೧.೨೦೨೪ರಂದು ಒಪ್ಪಿಗೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ರಿಕ್ತವಾಗಿರುವ ಹುದ್ದೆಗಳನ್ನು ಅನುಲಕ್ಷಿಸಿ, ಅವಲಂಬಿತ ಅರ್ಜಿದಾರರಿಗೆ ನಿಯಮಾನುಸಾರ ಅನುಕಂಪ ಆಧಾರದಲ್ಲಿ ರಿಕ್ತವಿರುವ 'ಡಿ' ದರ್ಜೆ ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.

**೨೨೮.೭** ಭದ್ರತೆ ಮತ್ತು ಸ್ವಚ್ಛತೆ ಕಾರ್ಯಗಳ ಟೆಂಡರ್ ಕುರಿತು.

ಟಿಪ್ಪಣಿ : ೧. ಮೆ. ಕೌಶಲ್ಯ ಸೆಕ್ಯುರಿಟಿ ಸರ್ವಿಸ್, ಕಲಬುರಗಿ ಇವರಿಂದ ವಿಶ್ವವಿದ್ಯಾಲಯದ ಕಟ್ಟಡಗಳ ಭದ್ರತೆಗೆ ಹಾಗೂ ಕಟ್ಟಡಗಳ ಶುಚಿತ್ವ ನಿರ್ವಹಣೆಗಾಗಿ ಪಡೆಯುತ್ತಿದ್ದ ಸೇವೆಯನ್ನು ಕಾರ್ಯಕಾರಿ ಸಮಿತಿ ಸಭೆ ೨೨೭.೧೧ರ ನಿರ್ಣಯದನ್ವಯ ದಿನಾಂಕ ೩೦.೦೯.೨೦೨೪ರಿಂದ ಅನ್ವಯವಾಗುವಂತೆ ಟೆಂಡರ್‌ನ್ನು ರದ್ದುಗೊಳಿಸಲಾಗಿದೆ ಹಾಗೂ ಬದಲಿ ವ್ಯವಸ್ಥೆಯಾಗುವವರೆಗೆ ಸದರಿ ಸೇವೆಯನ್ನು ಮಾಡುತ್ತಿರುವ ಸಿಬ್ಬಂದಿಗಳನ್ನು ದಿನಗೂಲಿ ಲೆಕ್ಕದಲ್ಲಿ ಅಕ್ಟೋಬರ್ ೩೧, ೨೦೨೪ರವರೆಗೆ ಮುಂದುವರಿಸಲಾಗಿತ್ತು.

೨. ಸದರಿ ಸಂಸ್ಥೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಸುಮಾರು ೧೫–೨೦ ವರ್ಷಗಳಿಂದ ರಕ್ಷಣೆ ಮತ್ತು ಸ್ವಚ್ಛತೆ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ತಾವೆಲ್ಲರೂ ಸದರಿ ಹುದ್ದೆಯನ್ನು ನಂಬಿ ಬದುಕುತ್ತಿದ್ದೇವೆ. ಸದರಿ ಗುತ್ತಿಗೆಯನ್ನು ರದ್ದುಪಡಿಸಿರುವುದರಿಂದ ೪೭ ಜನ ಉದ್ಯೋಗ ವಂಚಿತರಾಗಿದ್ದೇವೆ ಸ್ಥಳೀಯರಾದ ತಮ್ಮನ್ನು ಮುಂದುವರೆಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಇದನ್ನು ಬೆಂಬಲಿಸಿ ಸ್ಥಳೀಯ ಶಾಸಕರು, ಸಂಘ ಸಂಸ್ಥೆಗಳು ಸದರಿ ಸಿಬ್ಬಂದಿಗಳನ್ನು ಮುಂದುವರೆಸುವಂತೆ ಕೋರಿಕೆ ಪತ್ರಗಳನ್ನು ಸಲ್ಲಿಸಿರುತ್ತಾರೆ.

೩. ಈ ಹಿನ್ನೆಲೆಯಲ್ಲಿ ಕೂಡಲೇ ರಕ್ಷಣೆ ಮತ್ತು ಸ್ವಚ್ಛತೆ ಕಾರ್ಯದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವವರೆಗೆ ಸದರಿ ಸಿಬ್ಬಂದಿಗಳನ್ನು ಮುಂದುವರೆಸಲು ಹಾಗೂ ಮಾಸಿಕ ಅಂದಾಜು ವೆಚ್ಚ ರೂ. ೭,೨೭,೧೯೫/-ಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯಗಳ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ, ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

೧. ಸ್ಥಳೀಯ ಶಾಸಕರಾದ ಶ್ರೀ ಹೆಚ್.ಆರ್. ಗವಿಯಪ್ಪ ಅವರು ಈ ಸಂಬಂಧ ವಿಶ್ವವಿದ್ಯಾಲಯಕ್ಕೆ ಅನುದಾನ ದೊರಕಿಸಿಕೊಡಲು ಉನ್ನತ ಶಿಕ್ಷಣ ಇಲಾಖೆ ಮಂತ್ರಿಗಳಲ್ಲಿ ವೈಯಕ್ತಿಕವಾಗಿ ಮನವಿ ಮಾಡುತ್ತೇನೆಂದು ಭರವಸೆ ನೀಡಿದ ಈ ಹಿನ್ನೆಲೆಯಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಭದ್ರತೆ ಮತ್ತು ಸ್ವಚ್ಛತೆ ಕಾರ್ಯ ನಿರ್ವಹಿಸಲು ಹೊರಗುತ್ತಿಗೆ ಆಧಾರಿತ ನೌಕರರ ಸೇವೆಯನ್ನು ಕೊಟೇಶನ್ ಮೂಲಕ ಪಡೆಯುವುದು.

೨. ಭದ್ರತೆ ಕಾರ್ಯನಿರ್ವಹಣೆಯ ಸೇವೆಗೆ ತಗಲುವ ಮಾಸಿಕ ಅಂದಾಜು ವೆಚ್ಚ ರೂ.೩,೯೬,೧೦೫/- ಹಾಗೂ ಸ್ವಚ್ಛತೆ ಕಾರ್ಯನಿರ್ವಹಣೆಯ ಸೇವೆಗೆ ತಗಲುವ ಮಾಸಿಕ ಅಂದಾಜು ವೆಚ್ಚ ರೂ.೩,೩೧,೦೯೦/- ಹೀಗೆ ಒಟ್ಟು ಅಂದಾಜು ವೆಚ್ಚ ರೂ.೭,೨೭,೧೯೫/- ಗಳಿಗೆ ಸಭೆ ಅನುಮೋದನೆ ನೀಡಿತು.

೩. ಎಷ್ಟು ವರ್ಷಗಳಿಂದ ಟೆಂಡರ್‌ನ್ನು ಕರೆಯಲಾಗುತ್ತಿದೆ ಎನ್ನುವ ಮಾಹಿತಿಯನ್ನು ನೀಡುವುದು. ಆರಂಭದಿಂದ ೨೦೨೪ರವರೆಗೆ ಯಾವ ಯಾವ ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಿ ವಿಶ್ವವಿದ್ಯಾಲಯದಲ್ಲಿ ರಕ್ಷಣೆ ಮತ್ತು ಸ್ವಚ್ಛತೆ ಕಾರ್ಯಗಳನ್ನು ನಿರ್ವಹಿಸಿವೆ ಎನ್ನುವ ಮಾಹಿತಿಗಳನ್ನು ಸಲ್ಲಿಸುವುದು.

೪. ಹೊರಗತ್ತಿಗೆ ಪಡೆಯುವ ಸಂಬಂಧ ಅಳವಡಿಸಿಕೊಂಡಿರುವ/ಕ್ರಮವಹಿಸಲಾಗಿರುವ (ವೇತನ/ಪಿಎಫ್/ಇಎಸ್/ಟೆಂಡರ್/ಸರ್ಕಾರದ) ನಿಯಮಗಳನ್ನು ಸಲ್ಲಿಸುವುದು.

೫. ಹೊರಗುತ್ತಿಗೆ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯದಿಂದಲೇ ಮುಂದುವರೆಸಲು ಅವಕಾಶವಿಲ್ಲದಿರುವ ಬಗ್ಗೆ ಸರ್ಕಾರದ ನಿಯಮಗಳನ್ನು ಸಲ್ಲಿಸುವುದು.

೬. ಸದರಿ ನಿಯಮಗಳ ಬಗ್ಗೆ ವಿಧಾನಸೌಧದಲ್ಲಿರುವ ಪಿ.ಎಫ್. ಸೆಲ್‌ನಿಂದ ಮಾಹಿತಿ ಪಡೆಯುವುದು.

೭. ಈ ಎಲ್ಲಾ ನಿಯಮಗಳನ್ನು ಒಳಗೊಂಡ ಸ್ಪಷ್ಟ ದಾಖಲೆಗಳು ಹಾಗೂ (ಮಾನವ ಸಂಪನ್ಮೂಲಕ್ಕೆ ಹಾಗೂ ಸೇವಾ ಶುಲ್ಕ) ಅಂದಾಜು ವೆಚ್ಚಗಳೊಂದಿಗೆ ಟೆಂಡರ್ ಆಹ್ವಾನಿಸುವ ಡಾಕ್ಯುಮೆಂಟ್ಸ್‌ಗಳನ್ನು ಸಿದ್ಧಪಡಿಸಿ, ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸುವುದು.

೮. ಸದರಿ ವಿಷಯದ ಕುರಿತು ಚರ್ಚಿಸಲು ಕಾರ್ಮಿಕ ಇಲಾಖೆಯ ಅಧಿಕಾರಿಯೊಬ್ಬರ ಸದಸ್ಯತ್ವವನ್ನು ಒಳಗೊಂಡ ಉಪ ಸಮಿತಿಯೊಂದನ್ನು ರಚಿಸಿ ವರದಿಯನ್ನು ಸಿದ್ಧಪಡಿಸುವುದು.

೨೨೮.೮ ಕನ್ನಡ ವಿಶ್ವವಿದ್ಯಾಲಯದ ೨೦೨೩-೨೪ನೇ ಸಾಲಿನ ವಾರ್ಷಿಕ ವರದಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ೨೦೨೩-೨೪ನೇ ಸಾಲಿನ ವಾರ್ಷಿಕ ವರದಿಯನ್ನು ಮುದ್ರಿಸಿ ಸರ್ಕಾರಕ್ಕೆ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ೨೦೨೩-೨೪ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯು ಪರಿಶೀಲಿಸುವ ಸಲುವಾಗಿ ಅವುಗಳ ಸಾಫ್ಟ್ ಪತ್ರಿಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯರು ಪರಿಶೀಲಿಸಿದ ನಂತರ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು.

೨೨೮.೯ ದಿನಾಂಕ ೧೨.೧೧.೨೦೨೪ರಂದು ೨೦೨೪-೨೫ನೇ ಸಾಲಿನ ಐಕ್ಯುಎಸಿ ಪದಾಧಿಕಾರಿ ಮಂಡಳಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೧೨.೧೧.೨೦೨೪ರ ಮಂಗಳವಾರದಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ವಿಶ್ವವಿದ್ಯಾಲಯದ ೨೦೨೪-೨೫ನೇ ಸಾಲಿನ ಐಕ್ಯುಎಸಿ ಪದಾಧಿಕಾರಿ ಮಂಡಳಿ ಸಭೆ(೨) ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

೨೨೮.೧೦ ಶ್ರೀ ಪಿ.ಎಸ್. ಕರುಣಾಕರ ಇವರ ಅನಧಿಕೃತ ಗೈರು ಹಾಜರಿ ಹಾಗೂ ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ ಇವರು ಸಲ್ಲಿಸಿರುವ ವರದಿ ಕುರಿತು.

ಟಿಪ್ಪಣಿ : ಶ್ರೀ ಪಿ.ಎಸ್. ಕರುಣಾಕರ ಇವರು ದಿನಾಂಕ ೦೩.೦೩.೨೦೨೩ ರಿಂದ ಇಲ್ಲಿಯವರೆಗೆ ಅಂದರೆ ದಿನಾಂಕ ೧೩.೧೧.೨೦೨೪ರವರೆಗೆ ಒಟ್ಟು ೫೮೨ ದಿನ ಅನಧಿಕೃತ ಗೈರು ಹಾಜರಿಯಾಗಿದ್ದಾರೆ. ಇವರ ಗೈರು ಹಾಜರಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯಾದ ಶ್ರೀ ಎಚ್.ಎಸ್. ಮಿಟ್ಟಲಕೋಡ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ ಇವರು ದಿನಾಂಕ ೧೮.೧೦.೨೦೨೪ರಂದು ವಿಚಾರಣೆ ನಡೆಸಿ ಐದು ಪುಟಗಳ ವರದಿಯನ್ನು ದಿನಾಂಕ ೨೧.೧೦.೨೦೨೪ರಂದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ (ಸಂಬಂಧಿಸಿದ ಟಿಪ್ಪಣಿ ಮತ್ತು ಅಗತ್ಯ ಮಾಹಿತಿಗಳನ್ನು ಲಗತ್ತಿಸಿದೆ). ಈ ಹಿನ್ನೆಲೆಯಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಈ ಕೆಳಗಿನಂತೆ ಕ್ರಮವಹಿಸಲು ತೀರ್ಮಾನಿಸಿತು.

೧. ವಿಚಾರಣಾಧಿಕಾರಿಯಾದ ಶ್ರೀ ಎಚ್.ಎಸ್. ಮಿಟ್ಟಲಕೋಡ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಧಾರವಾಡ ಇವರು ನೀಡಿರುವ ವರದಿಯ ಹಿನ್ನೆಲೆಯಲ್ಲಿ ಸರ್ಕಾರದ ನಿಯಮಾನುಸಾರ ಶಿಕ್ಷೆಗೆ ಅನುಮೋದನೆ ನೀಡಿತು.

೨. ವಿಶ್ವವಿದ್ಯಾಲಯದ ನಿಯಮ ಮತ್ತು ಕೆಸಿಎಸ್‌ಆರ್ ನಿಯಮಾನುಸಾರ ಸದರಿಯವರು ಮಾಡಿರುವ ಆಪಾದನೆಗಳು ರುಜುವಾತಾದ ಹಿನ್ನೆಲೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬಹುದೆಂದು ಸಭೆ ತೀರ್ಮಾನಿಸಿತು.

೨೨೮.೧೧ ದಿನಾಂಕ ೨೪.೧೦.೨೦೨೪ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ಮಾಸಿಕ ಆರ್ಥಿಕ ನೆರವು ಮುಂತಾದ ವಿಷಯಗಳ ಕುರಿತು ದಿನಾಂಕ ೨೪.೧೦.೨೦೨೪ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಶೇಷ ಘಟಕದ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

೧. ಈ ಹಿಂದಿನ ಸಾಲಿನಲ್ಲಿ ಪಿಎಚ್.ಡಿ. ಅಧ್ಯಯನ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಐದು ವರ್ಷದ ನಂತರ ವಿಶ್ವವಿದ್ಯಾಲಯವು ನೀಡಿರುವ ಮಾಸಿಕ ಆರ್ಥಿಕ ನೆರವಿಗೆ ಲೆಕ್ಕ ಪರಿಶೋಧನೆಯು ಆಕ್ಷೇಪಣೆಯನ್ನು ವ್ಯಕ್ತಪಡಿಸಿ ವಸೂಲಾತಿಗೆ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ (ಹೆಚ್ಚಿನ ಅವಧಿಗೆ) ವಿದ್ಯಾರ್ಥಿಗಳಿಗೆ ನೀಡಿರುವ ಮಾಸಿಕ ಆರ್ಥಿಕ ನೆರವಿನ ಮೊತ್ತವನ್ನು ವಿಶ್ವವಿದ್ಯಾಲಯಕ್ಕೆ ಹಿಂದಿರುಗಿಸುವಂತೆ ಸೂಚಿಸಿ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಪತ್ರ ಬರೆಯುವುದು.

೨. ೨೦೨೫–೨೬ನೇ ಸಾಲಿನಿಂದ ವಿದ್ಯಾರ್ಥಿಗಳಿಗೆ ಮಾಸಿಕ ಆರ್ಥಿಕ ನೆರವನ್ನು ಐದು ವರ್ಷಗಳ ಅವಧಿಗೆ ಮಾತ್ರ ಸೀಮಿತಗೊಳಿಸಿ ಕಡ್ಡಾಯಗೊಳಿಸುವುದು. ಈ ಸಂಬಂಧ ವಿದ್ಯಾರ್ಥಿಗಳಿಂದ ಒಪ್ಪಿಗೆ/ಮುಚ್ಚಳಿಕೆಯನ್ನು ಪಡೆಯಲು ಸಭೆ ತೀರ್ಮಾನಿಸಿತು.

೨೨೮.೧೨ ದಿನಾಂಕ ೧.೮.೨೦೨೩ರಂದು ಕಮಲಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ (ಗುನ್ನೆ) ಸಂಖ್ಯೆ ೬೦/೨೦೨೩ ಕಮಲಾಪುರ ಪಿ.ಎಸ್.) ವಿಶ್ರಾಂತ ಕುಲಪತಿಗಳಾದ ಡಾ. ಮಲ್ಲಿಕಾ ಎಸ್. ಘಂಟಿ ಮತ್ತು ಇತರರಿಗೆ ಸಂಬಂಧಿಸಿದ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ಸಲ್ಲಿಸಿ ಅಂಗೀಕೃತವಾದ 'ಬಿ' ಅಂತಿಮ ವರದಿಯ ಮಾಹಿತಿ ಕುರಿತು.

ಟಿಪ್ಪಣಿ : ೧. ಡಾ. ಎ. ಸುಬ್ಬಣ್ಣ ರೈ, ನಿಕಟಪೂರ್ವ ಕುಲಸಚಿವರು ಇವರು ವಿಶ್ರಾಂತ ಕುಲಪತಿ ಡಾ. ಮಲ್ಲಿಕಾ ಎಸ್. ಘಂಟಿ ಮತ್ತು ನಿವೃತ್ತ ಅಧಿಕಾರಿಗಳು ಹಾಗೂ ಸೇವೆಯಲ್ಲಿರುವ ಸಿಬ್ಬಂದಿಗಳು ೨೦೧೫–೧೬ ಮತ್ತು ೨೦೧೬–೧೭ರಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಕಾನೂನು ಬಾಹಿರವಾಗಿ ನಡೆಸಿ ಭ್ರಷ್ಟಚಾರ ಎಸಗಿದ್ದಾರೆಂದು ಆರೋಪಿಸಿ ಕಮಲಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ (ಗುನ್ನೆ) ಸಂಖ್ಯೆ ೬೦/೨೦೨೩ ಕಮಲಾಪುರ ಪಿ.ಎಸ್.) ದಿನಾಂಕ ೦೧.೦೮.೨೦೨೩ರಂದು ದಾಖಲಿಸಿದ್ದರು.

೨. ನಂತರದಲ್ಲಿ ತನಿಖಾಧಿಕಾರಿಯಾಗಿ ಕಮಲಾಪುರ ಠಾಣೆಯ ಪಿಎಸ್‌ಐ ಅವರು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರುದಾರರಾದ ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು ಇವರು ಆರೋಪಿಸಿದ ವಿಷಯಗಳನ್ನು, ಇಲಾಖೆಯಿಂದ ತನಿಖೆ ನಡೆಸಿ 'ಬಿ' ಅಂತಿಮ ವರದಿಯನ್ನು ಹೊಸಪೇಟೆಯ ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ದಿನಾಂಕ ೧೭.೦೮.೨೦೨೪ರಂದು ಸಲ್ಲಿಸಿರುತ್ತಾರೆ.

೩. ಸದರಿ ಪ್ರಕರಣದ ಕುರಿತು ಅಂತಿಮ 'ಬಿ' ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಾಗ ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು ಇವರು ಖುದ್ದು ಹಾಜರಾಗಿ ಸದರಿ ಪ್ರಕರಣವನ್ನು ಮುಂದುವರಿಸುವುದಿಲ್ಲವೆಂದು ಮತ್ತು ಪ್ರಕರಣವನ್ನು ಇಲ್ಲಿಗೆ ಮುಕ್ತಾಯಗೊಳಿಸಲು ತಮ್ಮ ಒಪ್ಪಿಗೆ ಇದೆ ಎಂದು ಪೀರ್ಯಾದುದಾರಾಗಿ ಲಿಖಿತ ಹೇಳಿಕೆಯನ್ನು ದಿನಾಂಕ ೨೦.೦೮.೨೦೨೪ರಂದು ನೀಡಿರುತ್ತಾರೆ.

೪. ಈ ವರದಿಯಲ್ಲಿರುವ ಅಂಶಗಳನ್ನು ಮತ್ತು ಪೀರ್ಯಾದುದಾರರ ಹೇಳಿಕೆಯನ್ನು ಹೊಸಪೇಟೆಯ ಮಾನ್ಯ ನ್ಯಾಯಾಲಯವು ಅಂಗೀಕರಿಸಿ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತದೆ ಎಂದು ಹಿಂದಿನ ವಿಶ್ರಾಂತ ಕುಲಪತಿಗಳಾದ ಡಾ. ಮಲ್ಲಿಕಾ ಎಸ್. ಘಂಟಿ ಅವರು ಲಿಖಿತವಾಗಿ ಪತ್ರದ ಮೂಲಕ ಕುಲಸಚಿವರ ಕಚೇರಿಗೆ ಸ್ವೀಕೃತಗೊಂಡ ದಿನಾಂಕ ೦೭.೧೧.೨೦೨೪ರ ಮೂಲಕ ಸಲ್ಲಿಸಿರುತ್ತಾರೆ.

ಈ ಮೇಲಿನ ವಿವರಣಾತ್ಮಕ ಅಂಶಗಳನ್ನು ಸಮಿತಿಯ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ತೀರ್ಮಾನಿಸಿತು.

೧. ವಿಶ್ರಾಂತ ಕುಲಪತಿಗಳಾದ ಡಾ. ಮಲ್ಲಿಕಾ ಎಸ್. ಘಂಟಿ ಮತ್ತು ಇತರರಿಗೆ ಸಂಬಂಧಿಸಿದ ಪ್ರಕರಣದ 'ಬಿ' ರಿಪೋರ್ಟ್ ಕುರಿತು ಸರ್ಕಾರಕ್ಕೆ ಮಾಹಿತಿ ನೀಡುವುದು.

೨. ಈ ಸಂಬಂಧ ತಡೆಹಿಡಿಯಲಾಗಿದ್ದ ವಯೋನಿವೃತ್ತಿ ಹೊಂದಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಉಪಲಬ್ಧಿಗಳನ್ನು ಪಾವತಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳುವುದು ಹಾಗೂ ಈ ಕುರಿತ ವಿವರಗಳನ್ನು ಸರ್ಕಾರದ ಗಮನಕ್ಕೆ ತರುವುದು.

೨೨೮.೧೩ ವಿಶ್ವವಿದ್ಯಾಲಯದ ಸಂಪನ್ಮೂಲಗಳ ವಿವರಗಳ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ, ವಿಶ್ವವಿದ್ಯಾಲಯದ ಸಂಪನ್ಮೂಲಕ್ಕೆ ಸಂಬಂಧಿಸಿದ ಅನುದಾನದ ವಿವರಗಳನ್ನು ಸಿದ್ಧಪಡಿಸಿ ಸಲ್ಲಿಸಲು ತೀರ್ಮಾನಿಸಿತು.

೨೨೮.೧೪ ವಿಶ್ವವಿದ್ಯಾಲಯದ ಜಮೀನು ಸರ್ವೆ ಕಾರ್ಯವನ್ನು ಕೈಗೊಳ್ಳುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ, ವಿಶ್ವವಿದ್ಯಾಲಯದ ಜಮೀನು ಸರ್ವೆ ಕುರಿತು ಸರ್ಕಾರದ ಸಂಬಂಧಿಸಿದ ಇಲಾಖೆಗೆ (ಲ್ಯಾಂಡ್ ಸೆಕ್ರೆಟರಿ ಅವರಿಗೆ) ಪತ್ರ ಬರೆದು ನಿಯಮಾನುಸಾರ ಸರ್ವೆ ಕಾರ್ಯವನ್ನು ಕೈಗೊಳ್ಳಲು ಸಭೆ ತೀರ್ಮಾನಿಸಿತು.

೨೨೮.೧೫ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳ ಸಮಗ್ರ ವಿವರಗಳನ್ನೊಳಗೊಂಡ ವರದಿಯನ್ನು ಸಿದ್ಧಪಡಿಸುವ ಕುರಿತು.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರಗಳ ಸಮಗ್ರ ವಿವರಗಳನ್ನೊಳಗೊಂಡ ವರದಿಯನ್ನು ಸಿದ್ಧಪಡಿಸಲು ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಗೊಂಡ ಉಪಸಮಿತಿಯು ಸದರಿ ಕೇಂದ್ರಗಳಿಗೆ ಭೇಟಿ ನೀಡಿ ವರದಿ ಸಲ್ಲಿಸಲು ಸಭೆ ತೀರ್ಮಾನಿಸಿತು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು 25/11/24
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು 25/11/24
ಅಧ್ಯಕ್ಷರು